# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.

*ದಿನಾಂಕ 01/10/2020 ನೇ ಗುರುವಾರ ಬೆಳಗ್ಗೆ 11.00 ಗಂಟೆಗೆ ಸಮಿತಿಯ ಸಭಾಂಗಣದಲ್ಲಿ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ.ಎನ್. ಧರ್ಮಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ತುರ್ತು ವಿಶೇಷ ಸಭೆಯ ನಡವಳಿಗಳು.*

| ಕ್ರ.ಸಂ. | ಹಾಜರಿ | ಕ್ರ.ಸಂ. | ಗೈರುಹಾಜರಿ |
|---|---|---|---|
| 1 | ಶ್ರೀ ಧರ್ಮಪ್ಪ ಸಿ.ಎನ್., ಅಧ್ಯಕ್ಷರು | 1 | ಶ್ರೀ ದೇವರಾಜು ಡಿ.ಜಿ., ಸದಸ್ಯರು |
| 2 | ಶ್ರೀ ಟಿ.ಜಿ. ಕುಮಾರ್, ಉಪಾಧ್ಯಕ್ಷರು | 2 | ಶ್ರೀಮತಿ ಪಾರ್ವತಮ್ಮ, ಸದಸ್ಯರು |
| 3 | ಶ್ರೀ ಚಂದ್ರಶೇಖರ್ ಕೆ.ಎಸ್., ಸದಸ್ಯರು | 3 | ಶ್ರೀ ರೇಣುಕಾಪ್ರಸಾದ್, ಸದಸ್ಯರು |
| 4 | ಶ್ರೀ ಜಯರಾಮ, ಸದಸ್ಯರು | 4 | ಶ್ರೀ ಬಿ.ಆರ್. ಶ್ರೀಹರಿ, ಉಪ ನಿರ್ದೇಶಕರು, ಇಲಾಖಾ ಪ್ರತಿನಿಧಿ |
| 5 | ಶ್ರೀಮತಿ ಮಂಜುಳ, ಸದಸ್ಯರು | | |
| 6 | ಶ್ರೀ ಜಯಕುಮಾರ ಎಂ.ಸಿ., ಸದಸ್ಯರು | | |
| 7 | ಶ್ರೀ ಶಶಿಧರ ಎನ್.ಈ.,ಸದಸ್ಯರು | | |
| 8 | ಶ್ರೀ ಶಶಿಕುಮಾರ್ ಹೆಚ್.ಸಿ., ಸದಸ್ಯರು | | |
| 9 | ಶ್ರೀ ಟಿ.ಎಸ್. ರುದ್ರಯ್ಯ, ಸದಸ್ಯರು | | |
| 10 | ಶ್ರೀ ನಾಗರಾಜನಾಯ್ಕ ಎ.ಸಿ., ಸದಸ್ಯರು | | |
| 11 | ಶ್ರೀ ಆರ್. ಚಿಕ್ಕೇಗೌಡ, ಸದಸ್ಯರು | | |
| 12 | ಶ್ರೀ ಮಹಲಿಂಗಪ್ಪ, ಸದಸ್ಯರು | | |
| 13 | ಶ್ರೀಮತಿ ಡಿ.ಎನ್. ರೂಪ, ಸದಸ್ಯರು | | |

*ವಿಷಯ 1):* *ಕೃಉಮಾಸ, ಅರಸೀಕೆರೆ – 2020-21ನೇ ಸಾಲಿನ ನಬಾರ್ಡ್ ಡಬ್ಲ್ಯು.ಐ.ಎಫ್ 2014-15ರ ಯೋಜನೆಯಡಿ ಅನುಮೋದಿತ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ಚರಂಡಿಯೊಂದಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ಮುಚ್ಚು ಹರಾಜುಕಟ್ಟೆ, ವರ್ತಕರ ಮಳಿಗೆ, ಕಛೇರಿಯೊಡನೆ ರೈತಭವನ, ಕ್ಯಾಂಟೀನ್ ಕಟ್ಟಡ, ಮತ್ತು ಶೌಚಾಲಯ ವಿಭಾಗ ನಿರ್ಮಾಣ ಮತ್ತು ಗಂಡಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಚರಂಡಿಯೊಂದಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ನಿರ್ಮಾಣ ಕಾಮಗಾರಿ (ಐಟಂವಾರು ಟೆಂಡರ್)ಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ/ಅರಸೀ/629/2020-21 ದಿನಾಂಕ 20/07/2020 ರನ್ವಯ ಟೆಂಡರ್‌ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಅರಸೀಕೆರೆ ಇವರು ತಯಾರಿಸಿಕೊಟ್ಟಿರುವ ಟೆಂಡರ್‌ನ ತುಲನಾತ್ಮಕ ತಃಖ್ತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.*

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಈ ಸಮಿತಿಯ ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ/ಅರಸೀ/629/2020-21 ದಿನಾಂಕ 20/07/2020 ರಲ್ಲಿ 2020-21ನೇ ಸಾಲಿನ ನಬಾರ್ಡ್ ಡಬ್ಲ್ಯು.ಐ.ಎಫ್ 2014-15ರ ಯೋಜನೆಯಡಿ ಅನುಮೋದಿತ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ಚರಂಡಿಯೊಂದಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ಮುಚ್ಚು ಹರಾಜುಕಟ್ಟೆ, ವರ್ತಕರ ಮಳಿಗೆ, ಕಛೇರಿಯೊಡನೆ ರೈತಭವನ, ಕ್ಯಾಂಟೀನ್ ಕಟ್ಟಡ, ಮತ್ತು ಶೌಚಾಲಯ ವಿಭಾಗ ನಿರ್ಮಾಣ ಮತ್ತು ಗಂಡಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಚರಂಡಿಯೊಂದಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ನಿರ್ಮಾಣ ಕಾಮಗಾರಿ (ಐಟಂವಾರು ಟೆಂಡರ್) ಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಿದ್ದು, ಇದನ್ನು ದಿನಾಂಕ 24/07/2020 ರ ರಾಜ್ಯಮಟ್ಟದ ಆಂಗ್ಲ ದಿನಪತ್ರಿಕೆ "The Hindu", ರಾಜ್ಯಮಟ್ಟದ ಕನ್ನಡ ದಿನಪತ್ರಿಕೆಗಳಾದ "ಕನ್ನಡಪ್ರಭ", "ವಿಜಯಕರ್ನಾಟಕ" ಹಾಗೂ ಸ್ಥಳೀಯ ದಿನಪತ್ರಿಕೆಗಳಾದ "ಹಾಸನ ಮಾಧ್ಯಮ" ಮತ್ತು "ಜನತಾಮಾಧ್ಯಮ" ಗಳಲ್ಲಿನ ಪ್ರಕಟಣೆಯನುಸಾರ ಇ-ಟೆಂಡರ್ ಮುಖಾಂತರ ಸಲ್ಲಿಸಿದ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 26/08/2020 ರಂದು ತೆರೆಯಲಾಗಿದ್ದು, ಸದರಿ ಕಾಮಗಾರಿ ಟೆಂಡರ್‌ನಲ್ಲಿ ಭಾಗವಹಿಸಿದ್ದ 3 ಜನ ಗುತ್ತಿಗೆದಾರರುಗಳು ಸಲ್ಲಿಸಿರುವ ತಾಂತ್ರಿಕ ಮಾಹಿತಿಗಳನ್ನು

ತಾಂತ್ರಿಕ ವಿಭಾಗದವರ ಮುಖಾಂತರ ಟೆಂಡರ್ ಪರಿಶೀಲನಾ ಸಭಾ ನಿರ್ಣಯ ಕೈಗೊಳ್ಳಲು ಕೇಂದ್ರ ಕಛೇರಿಗೆ ಸಲ್ಲಿಸಿದ್ದು ಮಾನ್ಯ ಅಧೀಕ್ಷಕ ಅಭಿಯಂತರರು, ಕೃಷಿ ಮಾರಾಟ ಇಲಾಖೆಮ ಬೆಂಗಳೂರು ಇವರ ಪತ್ರ ಸಂಖ್ಯೆ ಕೃಮಾಇ/ಮಾಅಯೋ/ಅಅ/ಟೆಂಡರ್/ಡ್ಯಾಮ್–154/2020–21 ದಿನಾಂಕ 24/09/2020 ರನ್ವಯ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ 25/09/2020 ರಂದು ತೆರೆಯಲಾಗಿದ್ದು ಇದಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರು ತಾಂತ್ರಿಕ ಬಿಡ್‌ನ ಎವಲ್ಯೂಷನ್ ವರದಿ ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ದಿನಾಂಕ 25/09/2020 ರಂದು ತಯಾರಿಸಿ ದೃಢೀಕರಿಸಿ ಕಳುಹಿಸಿ ಕೊಟ್ಟಿರುವುದನ್ನು ದಿನಾಂಕ 01/10/2020 ರಂದು ನಡೆದ ಸಮಿತಿಯ ತುರ್ತು ವಿಶೇಷ ಸಭೆಯಲ್ಲಿ ಸಮಿತಿಯು ಈ ಕೆಳಕಂಡಂತೆ ವಿವರವಾಗಿ ಪರಿಶೀಲಿಸಿತು.

**:ಟೆಂಡರ್ ತುಲನಾತ್ಮಕ ತಃಖ್ತೆ:**

| ಕ್ರ. ಸಂ. | ಗುತ್ತಿಗೆದಾರರ ಹೆಸರು | 2018–19 ನೇ ಸಾಲಿನ ಅನುಮೋದಿತ ಶೆಡ್ಯೂಲ್ 'ಬಿ' ಪ್ರಕಾರ ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಬರುವ ಮೊತ್ತ | ಗುತ್ತಿಗೆದಾರರ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತದೊಂದಿಗೆ ಹೋಲಿಸಿದಾಗ ಬರುವ ಶೇಕಡವಾರು ವಿವರ | ಷರಾ |
|---|---|---|---|---|---|
| 1 | ಶ್ರೀ ತಿಮ್ಮರಾಯಿಗೌಡ, ನಾಗಮಂಗಲ, ಮಂಡ್ಯ | 4,24,78,806=85 | 4,66,93,032=70 | ಶೇ. 9.92 ರಷ್ಟು ಹೆಚ್ಚು | 1 ನೇ ಕಡಿಮೆ ದರ |
| 2 | ಶ್ರೀ ಕೆ.ಜೆ. ವಿಶ್ವನಾಥ್, ಬೆಂಗಳೂರು | 4,24,78,806=85 | 4,75,77,857=78 | ಶೇ. 12.38 ರಷ್ಟು ಹೆಚ್ಚು | 2 ನೇ ಕಡಿಮೆ ದರ |

ಸದರಿ ಕಾಮಗಾರಿ ಟೆಂಡರ್ ಸಲ್ಲಿಸಿದ್ದ ಗುತ್ತಿಗೆದಾರರಲ್ಲಿ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರುಗಳಾದ ಶ್ರೀ ತಿಮ್ಮರಾಯಿಗೌಡ, ನಾಗಮಂಗಲ, ಮಂಡ್ಯ ಮತ್ತು ಶ್ರೀ ಕೆ.ಜೆ. ವಿಶ್ವನಾಥ್, ಬೆಂಗಳೂರು ಇವರುಗಳು ಟೆಂಡರ್ ಅರ್ಹತಾ ಷರತ್ತುಗಳನ್ನು ಪೂರೈಸಿದ್ದು ಇವರುಗಳ ಪೈಕಿ ಶ್ರೀ ತಿಮ್ಮರಾಯಿಗೌಡ, ನಾಗಮಂಗಲ, ಮಂಡ್ಯ ಇವರು ನಮೂದಿಸಿರುವ ಐಟಂವಾರು ದರಗಳ ಒಟ್ಟು ಮೊತ್ತ **ರೂ. 4,66,93,032=70 ಗಳನ್ನು ಶೆಡ್ಯೂಲ್ 'ಬಿ' ಗೆ ಹೋಲಿಸಿದಾಗ ಶೇ. 9.92 ಹೆಚ್ಚು 1ನೇ ಕಡಿಮೆ ದರವಾಗಿದೆ (L1)**. ಸಮಿತಿಯು ಈ ದರಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು. ಟೆಂಡರ್ ದಾಖಲಾತಿಗಳನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಿಗೆ ತಾಂತ್ರಿಕ ವರ್ಗದವರ ಮೂಲಕ ಸಲ್ಲಿಸಿ ಮಂಜೂರಾತಿ ಪಡೆದು ಕಾರ್ಯಗತಗೊಳಿಸತಕ್ಕದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

*ವಿಷಯ 2): ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೇ ವಿಷಯಗಳು.*

(ಜಿ. ವಸಂತಕುಮಾರ್)
ಕಾರ್ಯದರ್ಶಿ (ಪ್ರ),
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.

(ಸಿ.ಎನ್. ಧರ್ಮಪ್ಪ)
ಅಧ್ಯಕ್ಷರು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.